## ಸಾತ್ ಕಚೇರಿ

ನಮ್ಮ ರಾಯಚೂರು ಐತಿಹಾಸಿಕ ಹಿನ್ನೆಲೆಯುಳ್ಳ ಜಿಲ್ಲೆ. ರಾಜ–ಮಹಾರಾಜರು ಆಳಿದ ನೆಲೆವೀಡಾಗಿದೆ. ಇದಕ್ಕೆ ಸಾಕ್ಷಿಯಾಗಿ ಈಗಲೂ ಅನೇಕ ಸ್ಮಾರಕಗಳನ್ನು ಇಲ್ಲಿ ಕಾಣಬಹುದು. ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದ ರಾಯಚೂರಿನಲ್ಲಿ ನಿಜಾಂ ಶೈಲಿಯ ವಿವಿಧ ಕಟ್ಟಡಗಳನ್ನು ಈಗಲೂ ಕಾಣಬಹುದು. ಇದರಂತೆ ಪ್ರಸ್ತುತ ಜಿಲ್ಲಾಧಿಕಾರಿಯವರ ಕಚೇರಿ ಇರುವ ಕಟ್ಟಡ ಐತಿಹಾಸಿಕ ಕೆಂಪು ರಂಗಿನ ಕಟ್ಟಡವಾಗಿದ್ದು, ಆಡಳಿತ ಕಚೇರಿಗಳ ಸಂಕೀರ್ಣವಾಗಿದೆ. ಎತ್ತರದ ಪ್ರದೇಶದಲ್ಲಿರುವ ಈ ಕಟ್ಟಡ ಆಗಲೂ ಆಡಳಿತ ಕಚೇರಿಯಾಗಿತ್ತು. ವಿವಿಧ ಏಳು ಇಲಾಖೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಆದ್ದರಿಂದ ಇದನ್ನು 'ಸಾತ್ ಕಚೇರಿ' ಎಂದು ಈಗಲೂ ಕರೆಯುತ್ತಾರೆ.

**–ಈರಣ್ಣ ಬೆಂಗಾಲಿ, ರಾಯಚೂರು**





## ಚಿನ್ನದ ಕಪ್ಪೆ!

ನೆಲ, ಜಲಗಳೆರಡರಲ್ಲೂ ಜೀವಿಸಬಲ್ಲ ಪ್ರಾಣಿ ಕಪ್ಪೆ. ಗದ್ದೆ ಬಯಲುಗಳಲ್ಲಿ ಸಾಕಷ್ಟು ದೊಡ್ಡದಾದ ಐದಾರು ಇಂಚು ಗಾತ್ರದ ಒರಟು ಚರ್ಮದ ಕಂದು, ಹಸಿರುಗಂದು, ಹಳದಿಗಂದು ಬಣ್ಣಗಳ ಕಪ್ಪೆಗಳು ಧಾರಾಳವಾಗಿವೆ. ಅವಕ್ಕಿಂತ ಸಣ್ಣದಾದ ನೀಳ ಶರೀರವಿರುವ ಒಂದು ಜಾತಿ ಮರಗಳ ಮೇಲೆ ವಾಸಿಸುವ ಮರಗಪ್ಪೆಗಳದ್ದು. ಗಾಳಿಯಲ್ಲಿ ಹಾರಾಡುವ ಕ್ರಿಮಿಕೀಟಗಳನ್ನು ಹಿಡಿದು ಹೊಟ್ಟೆ ತುಂಬಿಸಿಕೊಳ್ಳುವ ಈ ಮರಗಪ್ಪೆಗಳು ಹಸಿರು, ಕಂದು, ಕಿತ್ತಳೆ, ಕೆಂಪು ಮೊದಲಾದ ಆಕರ್ಷಕ ಬಣ್ಣ ಹೊಂದಿರುತ್ತವೆ.

ಮಳೆಗಾಲದ ಒಂದು ದಿನ ದಾರಿ ಬದಿಯಲ್ಲಿ ಆಕರ್ಷಕ ಹಳದಿ ಬಣ್ಣದ ಕಪ್ಪೆಯೊಂದು ಕಂಡುಬಂತು. ಜಾಗ್ರತೆಯಿಂದ ಹತ್ತಿರ ಹೋಗಿ ಅದರ ಅಂದವನ್ನು ಸವಿಯತೊಡಗಿದರೂ ಮಿಸುಕಾಡಲಿಲ್ಲ. ಆ ಅಪರೂಪದ ಬಣ್ಣದ ಕಪ್ಪೆ ಯಾವ ಕಾರಣಕ್ಕೋ ಗೊತ್ತಿಲ್ಲ ಸತ್ತೇಹೋಗಿತ್ತು. ಅಸುನೀಗಿದರೂ ತನ್ನ ವಿಶಿಷ್ಟ ಬಣ್ಣದಿಂದಾಗಿ ಜೀವಂತ ಇದೆಯೇನೋ ಎಂಬಂತೆ ಭಾಸವಾಗುತ್ತಿತ್ತು.

ಚಿತ್ರ, ಬರಹ:

**ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

## ಭೀಮನ ಬೆಣ್ಣೆ ಮುದ್ದೆ

ತಮಿಳುನಾಡಿನ ಚೆನ್ನೈ ಸಮೀಪವಿರುವ ಮಹಾಬಲಿಪುರಂ (ಮಾಮಲ್ಲಪುರಂ ಎಂದೂ ಕರೆಯುತ್ತಾರೆ) ಪ್ರಸಿದ್ಧ ಐತಿಹಾಸಿಕ ಸ್ಥಳ. ಇಲ್ಲಿರುವ ಸಮುದ್ರ ದಂಡೆಯ ಮಂದಿರ, ಪಾಂಡವರ ರಥಗಳೆಂದು ಕರೆಯುವ ಗುಡಿಗಳು, ಮತ್ತಿತರ ಕಟ್ಟಡಗಳು ಆಕರ್ಷಕವಾಗಿದ್ದು ಪ್ರವಾಸಿಗರ ಗಮನ ಸೆಳೆಯುತ್ತವೆ.

ಇವುಗಳ ಜೊತೆಗೆ ಇಲ್ಲಿರುವ ಬೃಹತ್ ಬಂಡೆಯೊಂದು (ಭೀಮನ ಬೆಣ್ಣೆ ಮುದ್ದೆ) ಎಂದೇ ಪ್ರಸಿದ್ಧವಾಗಿದೆ. ಸುಮಾರು 30 ಅಡಿ ವ್ಯಾಸವಿದ್ದು, ಎದುರಿಗೆ ಗೋಳಾಕಾರವಾಗಿ ಕಾಣುವ ಬಂಡೆ ಇಳಿಜಾರಾಗಿರುವ ಬಂಡೆಯ ಮೇಲೆ ನಿಂತಿರುವುದೇ ವಿಸ್ಮಯಕಾರಿಯಾಗಿದೆ.

**–ಅಭಿರಾಮ್ ಎಸ್, ಬೆಂಗಳೂರು**

